**ಕರ್ನಾಟಕ ಸರ್ಕಾರ**

ಸಂಖ್ಯೆ: 14131/ಸಶಿಕ/ಒಒಎಸ್‌ಸಿ/ಪ್ರಾ&ಪ್ರೌ.ಶಿ.ಇ/ನ.ಅ.ಇ/2021-22

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು,
ದಿನಾಂಕ: 18.06.2021

**ಸುತ್ತೋಲೆ**

ವಿಷಯ: ಕೋವಿಡ್-19 ರ ಎರಡನೇ ಅಲೆಯ ಹಿನ್ನೆಲೆ ಹಾಗೂ ಆರ್.ಟಿ.ಇ-2009 ಕಾಯ್ದೆ ಮತ್ತು ನಿಯಮಗಳು-2012ರ ಪ್ರಕಾರ ಎಲ್ಲಾ ಅರ್ಹ ಮಕ್ಕಳನ್ನು ಮುಖ್ಯ ವಾಹಿನಿ ತರಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ:
1) ಮಾನ್ಯ ಉಚ್ಚ ನ್ಯಾಯಲಯದ ರಿಟ್ ಅರ್ಜಿ ಸಂಖ್ಯೆ:15768/2013ರ ಸಂಬಂಧ ದೈನಂದಿನ ಆದೇಶಗಳು.
2) ಭಾರತ ಸರ್ಕಾರದ ಶಿಕ್ಷಣ ಇಲಾಖೆಯ ಪತ್ರದ ಸಂಖ್ಯೆ: ಐಎಸ್-15 ಸೆಕ್ಷನ್ ಶಾಸ್ತ್ರಿ ಭವನ್ ನವದೆಹಲಿ, ದಿನಾಂಕ: 04.05.2021ರಂತೆ.
3) ನಅಇ 202 ಎಂಡಬ್ಲ್ಯೂಪಿ 2019, ಬೆಂಗಳೂರು, ದಿನಾಂಕ: 14.12.2020 ರಂತೆ

*********

ವಿಷಯ ಮತ್ತು ಉಲ್ಲೇಖಗಳ ಅನ್ವಯ ಭಾರತ ಸಂವಿಧಾನದ ಆಶಯ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗುವಿಗೂ 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕ್ರಮಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ.

2020-21 ನೇ ಸಾಲಿನಲ್ಲಿ ಕೋವಿಡ್-19ರ ಹಿನ್ನಲೆಯಲ್ಲಿ ಪರ್ಯಾಯ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದರಿಂದ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ ಕ್ರಮವಹಿಸಲಾಗಿರುತ್ತದೆ.

ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ಸೇರದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕಟ್ಟುನಿಟ್ಟಿನ ಕ್ರಮವಹಿಸುವುದು ಅವಶ್ಯಕವಿರುತ್ತದೆ. ಈ ಸಂಬಂಧ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸುವುದು ಹಾಗೂ ಅವರಿಗೆ ಗುಣಾತ್ಮಕ ಶಿಕ್ಷಣ ನೀಡುವುದು ಸ್ಥಳೀಯ ಸರ್ಕಾರಗಳ ಜವಾಬ್ದಾರಿ ಆಗಿರುತ್ತದೆ. ಪ್ರಸಕ್ತ ಕೋವಿಡ್-19ರ ಎರಡನೇ ಅಲೆಯ ಹಿನ್ನೆಲೆಯಲ್ಲಿ ಶಾಲೆಗೆ ಸೇರದ ಹಾಗೂ ವಲಸಿತ ಮಕ್ಕಳನ್ನು ಮುಖ್ಯವಾಹಿನಿಗೆ ತಂದು ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸಿ ಪರ್ಯಾಯ ಕಾರ್ಯಕ್ರಮಗಳನ್ನು ಶಾಲಾ ಹಂತದಲ್ಲಿ ಹಾಗೂ ಸ್ಥಳೀಯ ಸರ್ಕಾರಗಳ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದುದರಿಂದ ಎಲ್ಲಾ ಅರ್ಹ ಮಕ್ಕಳನ್ನು ಶಾಲೆಗೆ ಸೇರಿಸಿ, ಅವರಿಗೆ ವಿವಿಧ ತಂತ್ರಗಳ ಅಡಿಯಲ್ಲಿ ಕಲಿಕೆಯು ಕುಂಠಿತವಾಗದ ರೀತಿಯಲ್ಲಿ ಕ್ರಮವಹಿಸಲು ಸೂಚಿಸಿದೆ.

**I. ಈ ಸಂಬಂಧ ಶಿಕ್ಷಣ ಇಲಾಖೆಯ ಪಾತ್ರ :**

1. ಕೋವಿಡ್-19ರ ಸಾಂಕ್ರಾಮಿಕ ಪಿಡುಗಿನ ಹಿನ್ನೆಲೆಯಲ್ಲಿ ಶಾಲೆಗಳು ತೆರೆಯದಿರುವುದರಿಂದ ಮಕ್ಕಳ ಕಲಿಕೆಗೆ ತೊಂದರೆಯಾಗದಂತೆ ದೈಹಿಕ ಅಂತರ ಕಾಪಾಡಿಕೊಂಡು ಸೂಕ್ತ ಸ್ಥಳಗಳಲ್ಲಿ ಕಲಿಕಾ ಕೇಂದ್ರಗಳನ್ನು ತೆರೆಯುವುದು.

2. ಶಾಲೆಗಳ ವ್ಯಾಪ್ತಿಯಲ್ಲಿರುವ ಗ್ರಂಥಾಲಯದ ಪುಸ್ತಕಗಳನ್ನು ಶಾಲಾ ಗ್ರಂಥಾಲಯದ ಪುಸ್ತಕಗಳನ್ನು ಉಪಯೋಗಿಸುವುದು ಹಾಗೂ ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣವಾಗಿ ಶಿಕ್ಷಕರು ವಿತರಿಸುವುದು.
3. ವಲಸೆ ಹೋಗುವ ಪಾಲಕರ ಮಕ್ಕಳು ಉಳಿಯುವಂತೆ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು.
4. ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿಯಾಗಿರುವ ಮಕ್ಕಳಲ್ಲಿ ಶಾಲಾ ವಯಸ್ಸಿನ ಅರ್ಹ ಮಕ್ಕಳು ಒಂದನೇ ತರಗತಿಗೆ ಪ್ರವೇಶ ಪಡೆದಿರುವ ಬಗ್ಗೆ ಶಾಲಾ ದಾಖಲಾತಿ ಹಾಗೂ ಅಂಗನವಾಡಿ ದಾಖಲಾತಿಯನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
5. ಯಾವುದೇ ಮಗು ಗೈರುಹಾಜರಿಯಾದ್ದಲ್ಲಿ, ವಿದ್ಯಾರ್ಥಿ ಜಾಡು (child tracking) ಮೂಲಕ ಯಾವುದಾದರೂ ಶಾಲೆಯಲ್ಲಿ ಹಾಜರಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
6. ಸ್ಥಳಿಯ ಸಂಸ್ಥೆಯ ನೆರವಿನೊಂದಿಗೆ ಮಕ್ಕಳಿಗೆ ವಿವಿಧ ತಂತ್ರಗಳ ಅಡಿಯಲ್ಲಿ ಎಲ್ಲಾ ಮಕ್ಕಳು ದಾಖಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಅವರಿಗೆ ಕಲಿಕೆಯನ್ನುಂಟು ಮಾಡುವ ಸನ್ನಿವೇಶಗಳನ್ನು ನಿರ್ಮಿಸುವುದು.
7. ಕೋವಿಡ್–19ರ ಸಾಂಕ್ರಾಮಿಕ ಪಿಡುಗು ಸಂದರ್ಭದಲ್ಲಿ ವಲಸೆ ಬಂದಿರುವ ಮಕ್ಕಳನ್ನು ಸಹ ವಯೋಮಾನಕ್ಕೆ ಅನುಗುಣವಾಗಿ ತರಗತಿಗಳಿಗೆ ದಾಖಲು ಮಾಡಿಕೊಂಡು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮವಹಿಸುವುದು.
8. ಮಕ್ಕಳಿಗೆ ಔಪಚಾರಿಕ ಶಿಕ್ಷಣ ಈಗ ಕಷ್ಟಸಾಧ್ಯವಾಗಿದ್ದು, ಪೂರಕವಾಗಿ ನಿರಂತರ ಕಲಿಕೆಗೆ ಅವಕಾಶ ಕಲ್ಪಿಸುವುದು. ಇಲಾಖಾ ವತಿಯಿಂದ ನಿರ್ವಹಿಸುತ್ತಿರುವ ಕಾರ್ಯಕ್ರಮಗಳೊಂದಿಗೆ ಸ್ಥಳೀಯ ಮಟ್ಟದಲ್ಲಿ ಸಮುದಾಯ, ನಿವೃತ್ತ ಶಿಕ್ಷಕರು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು ಹಾಗೂ ಮಕ್ಕಳಿಗೆ ಗೃಹಪಾಠ ಮತ್ತು ಅಭ್ಯಾಸ ಹಾಳೆಗಳನ್ನು ಒದಗಿಸಿ ಮೇಲ್ವಿಚಾರಣೆ ಹಾಗೂ ಸೂಚನೆಗಳನ್ನು ನೀಡುವುದು.
9. ಎಸ್.ಡಿ.ಎಂ.ಸಿ ಸದಸ್ಯರ ಹಾಗೂ ಸಮುದಾಯದ ಸಹಕಾರದೊಂದಿಗೆ ಶಾಲೆಗೆ ಸೇರದ ಮತ್ತು ಶಾಲೆ ಬಿಟ್ಟ ಮಕ್ಕಳ ಸಂಖ್ಯೆಯನ್ನು ಶೂನ್ಯಕ್ಕೆ ತರುವುದು.
10. ತಂತ್ರಜ್ಞಾನ ಆಧಾರಿತ ಕಲಿಕೆಯು ತಂತ್ರಜ್ಞಾನ ಲಭ್ಯವಿಲ್ಲದ ಜನವಸತಿ ಪ್ರದೇಶಗಳಲ್ಲಿ (remote areas)ವಾಸ ಮಾಡುತ್ತಿರುವ ಮಕ್ಕಳಿಗೆ Offline ಮೂಲಕ ಪರ್ಯಾಯ ವ್ಯವಸ್ಥೆ ಮಾಡುವುದು.
11. ಕೋವಿಡ್–19ರ 2ನೇ ಅಲೆಯ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಮಾನಸಿಕ ಹಾಗೂ ಅತ್ಮಸ್ಥೈರ್ಯ ತುಂಬುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
12. ಪ್ರತಿ ವರ್ಷ ಮನೆ–ಮನೆ ಸಮೀಕ್ಷೆಯ ಮೂಲಕ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸುವ ಸಂಬಂಧ ನಿರ್ದಿಷ್ಟವಾದ ಮತ್ತು ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ SATS ನಲ್ಲಿ ಕಾಲಕಾಲಕ್ಕೆ ಇಂದೀಕರಿಸುವುದು.
13. ಶಾಲಾ ಮುಖ್ಯ ಶಿಕ್ಷಕರು ಪೋಷಕರ whatsApp ಗುಂಪುಗಳನ್ನು ರಚಿಸಿ, ಆಗಿಂದಾಗ್ಗೆ ಪೂರಕ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವುದು.
14. 14 ವರ್ಷ ಮೇಲ್ಪಟ್ಟ ಶಾಲೆ ಬಿಟ್ಟ ವಿದ್ಯಾರ್ಥಿಗಳಿಗೆ SIOS ಮತ್ತು NIOS ಮೂಲಕ ನೋಂದಾಯಿಸಿ ದೂರ ಶಿಕ್ಷಣ ಪಡೆಯಲು ಮಾರ್ಗದರ್ಶನ ನೀಡಿ ಸಹಕರಿಸುವುದು.
15. BIERTಗಳ ಸಹಕಾರದೊಂದಿಗೆ CWSN ಮಕ್ಕಳ ಬಗ್ಗೆ ವಿಶೇಷ ನಿಗಾ ವಹಿಸುವುದು.
16. ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ನಿಗದಿ ಪಡಿಸಿರುವ ವಿಶೇಷ ತರಬೇತಿಗಳನ್ನು ಆಯೋಜಿಸುವುದು.

17. ಶಾಲಾ ಹಂತದಲ್ಲಿ ಪೋಷಕರ ಗುಂಪು ಮತ್ತು ಸ್ವಯಂ ಸೇವಕರ ಗುಂಪುಗಳನ್ನು ರಚಿಸಿ, ಪ್ರತಿದಿನ ವಿದ್ಯಾರ್ಥಿಗಳ ಕಲಿಕೆಗೆ ಸಹಕಾರ ಪಡೆಯುವುದು.
18. ಕೋವಿಡ್ 19 ಸಂದರ್ಭದಲ್ಲಿ ಮಕ್ಕಳ ಸ್ವಾಸ್ತ್ಯದ ಬಗ್ಗೆ ಮನೋದರ್ಪಣ್ ಮೂಲಕ ಸೂಚನೆಗಳನ್ನು ಸುತ್ತೋಲೆಯಲ್ಲಿ ನೀಡಿದ್ದು, ಅವುಗಳನ್ನು ಪಾಲಿಸುವ ವ್ಯವಸ್ಥೆ ಮಾಡುವುದು.
19. ಸರ್ಕಾರಿ ಆದೇಶ ಸಂಖ್ಯೆ: ಇಡಿ 38 ಮಾಹಿತಿ 2013, ದಿನಾಂಕ: 15.03.2021ರ ಅಧಿಸೂಚನೆಯಲ್ಲಿ ಹಾಜರಾತಿ ಅಧಿಕಾರಿಗಳ ಜವಾಬ್ದಾರಿಯನ್ನು ತಿಳಿಸಿದ್ದು, ಅದರಂತೆ ಕ್ರಮವಹಿಸುವುದು. ಈ ಸಂಬಂಧ ಶಿಕ್ಷಣ ಸಂಯೋಜಕರು ತಮ್ಮ ವ್ಯಾಪ್ತಿಯ ಸಿ.ಆರ್.ಪಿಗಳ ಸಹಕಾರದೊಂದಿಗೆ ಕಾರ್ಯ ಪ್ರವೃತ್ತರಾಗಿ ತಮ್ಮ ಕರ್ತವ್ಯ ನಿರ್ವಹಿಸುವುದು.
20. ಸರ್ಕಾರಿ ಆದೇಶ ಸಂಖ್ಯೆ: ಇಡಿ 38 ಮಾಹಿತಿ 2013, ದಿನಾಂಕ: 15.03.2021ರ ಅಧಿಸೂಚನೆಯಲ್ಲಿ ಹಾಜರಾತಿ ಅಧಿಕಾರಿಗಳ ಜವಾಬ್ದಾರಿಯನ್ನು ತಿಳಿಸಿದ್ದು, ಅದರಂತೆ ಕ್ರಮವಹಿಸುವುದು. ಈ ಸಂಬಂಧ ಶಿಕ್ಷಣ ಸಂಯೋಜಕರು ತಮ್ಮ ವ್ಯಾಪ್ತಿಯ ಸಿ.ಆರ್.ಪಿಗಳ ಸಹಕಾರದೊಂದಿಗೆ ಕಾರ್ಯ ಪ್ರವೃತ್ತರಾಗಿ ತಮ್ಮ ಕರ್ತವ್ಯ ನಿರ್ವಹಿಸುವುದು.
21. ಪೋಷಕರು, ಸ್ವಯಂ ಸೇವಕರು ಹಾಗೂ ಶಿಕ್ಷಕರನ್ನು ಒಳಗೊಂಡಂತೆ ಶಾಲಾ ವ್ಯಾಪ್ತಿಯಲ್ಲಿ ಪ್ರತಿ ದಿನ ವಿದ್ಯಾರ್ಥಿಗಳ ಕಲಿಕೆಗೆ ಮಾರ್ಗದರ್ಶನ ನೀಡುವುದು.
22. ಮಾಸಿಕ ಸಭೆಗಳಲ್ಲಿ ಶಾಲೆಗೆ ಸೇರಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಮಾಹಿತಿಯನ್ನು ಚರ್ಚಿಸಿ ಉತ್ತಮ ಪಡಿಸಲು, ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳ ಸಹಕಾರ ಪಡೆಯುವುದು.
23. ಬಿಬಿಎಮ್‌ಪಿ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ನ ಸದಸ್ಯರನ್ನು ಸಂಪರ್ಕಿಸಿ ಅಗತ್ಯ ಸಹಕಾರವನ್ನು ಪಡೆಯುವುದು.

## II. ಈ ಸಂಬಂಧ ಸ್ಥಳೀಯ ಸರ್ಕಾರಗಳ ಪಾತ್ರ :

1. ಸ್ಥಳೀಯ ಸರ್ಕಾರಗಳು ಕೋವಿಡ್-19ರ 2ನೇ ಅಲೆಯ ಹಿನ್ನಲೆಯಲ್ಲಿ ಮಕ್ಕಳಿಗೆ ಮಾಸ್ಕ್ ವ್ಯವಸ್ಥೆ, ಕೈ ಸ್ವಚ್ಛಗೊಳಿಸುವ ಸಾಬೂನು ಹಾಗೂ ನೀರಿನ ವ್ಯವಸ್ಥೆ ಕಲ್ಪಿಸುವುದು.
2. ಶಾಲಾ ಹಂತದಲ್ಲಿ ಕಲಿಕಾ ಚಟುವಟಿಕೆಗಳಿಗಾಗಿ ಅವಶ್ಯವಿದ್ದಲ್ಲಿ ದೂರದರ್ಶನ ಒದಗಿಸುವ ವ್ಯವಸ್ಥೆ ಮಾಡುವುದು.
3. ಯಾವುದೇ ಮಗು ಗೈರುಹಾಜರಿಯಾದ್ದಲ್ಲಿ, ವಿದ್ಯಾರ್ಥಿ ಜಾಡು (child tracking) ಮೂಲಕ ಯಾವುದಾದರೂ ಶಾಲೆಯಲ್ಲಿ ಹಾಜರಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
4. ಮಕ್ಕಳ ರಕ್ಷಣಾ ಕಾಯ್ದೆ, ಬಾಲ ಕಾರ್ಮಿಕ ಕಾಯ್ದೆ ಮತ್ತು ಬಾಲ್ಯ ವಿವಾಹ ನಿಷೇಧ ವಿಷಯಗಳು ಹಾಗೂ ಅವುಗಳ ಉಲ್ಲಂಘನೆಗೆ ನೀಡಿರುವ ಶಿಕ್ಷೆಗಳ ಬಗ್ಗೆ ಎಸ್‌ಡಿಎಮ್‌ಸಿ ಸದಸ್ಯರಿಗೆ ಹಾಗೂ ಸಮುದಾಯಕ್ಕೆ ಅರಿವು ಮೂಡಿಸುವುದು.
5. ಸ್ಥಳಿಯ ಸಂಸ್ಥೆಯ ನೆರವಿನೊಂದಿಗೆ ಮಕ್ಕಳಿಗೆ ವಿವಿಧ ತಂತ್ರಗಳ ಅಡಿಯಲ್ಲಿ ಎಲ್ಲಾ ಮಕ್ಕಳು ದಾಖಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಅವರಿಗೆ ಕಲಿಕೆಯನ್ನುಂಟು ಮಾಡುವ ಸನ್ನಿವೇಶಗಳನ್ನು ನಿರ್ಮಿಸುವುದು.
6. ಕೋವಿಡ್-19ರ ಸಾಂಕ್ರಾಮಿಕ ಪಿಡುಗು ಸಂದರ್ಭದಲ್ಲಿ ವಲಸೆ ಬಂದಿರುವ ಮಕ್ಕಳನ್ನು ಸಹ ವಯೋಮಾನಕ್ಕೆ ಅನುಗುಣವಾಗಿ ತರಗತಿಗಳಿಗೆ ದಾಖಲು ಮಾಡಿಕೊಂಡು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮವಹಿಸುವುದು.
7. ಎಸ್.ಡಿ.ಎಂ.ಸಿ ಸದಸ್ಯರ ಹಾಗೂ ಸಮುದಾಯದ ಸಹಕಾರದೊಂದಿಗೆ ಶಾಲೆಗೆ ಸೇರದ ಮತ್ತು ಶಾಲೆ ಬಿಟ್ಟ ಮಕ್ಕಳ ಸಂಖ್ಯೆಯನ್ನು ಶೂನ್ಯಕ್ಕೆ ತರುವುದು.

8. ಸ್ಥಳೀಯ ಸರ್ಕಾರಗಳು ಎಲ್ಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸರಬರಾಜಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
9. ಪ್ರತಿ ಶಾಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನ ಸಂಬಂಧ 3 ಸದಸ್ಯರ ತಂಡವನ್ನು ಒಳಗೊಂಡಂತೆ ನೋಡಲ್ ಅಧಿಕಾರಿಯನ್ನು ವಾರ್ಡ್ ವ್ಯಾಪ್ತಿಯಲ್ಲಿ ನೇಮಿಸುವುದು.
    - ವಾರ್ಡ್ ಸದಸ್ಯರು.
    - ಕ್ರಿಯಾಶೀಲ ಎಸ್.ಡಿ.ಎಂ.ಸಿ ಸದಸ್ಯರು.
    - ಸಂಬಂಧಪಟ್ಟ ಶಾಲಾ ಶಿಕ್ಷಕರು.

    ಈ ಮೂರು ಜನ ಸದಸ್ಯರು ಆಗಿಂದಾಗ್ಗೆ ಸಭೆ ಸೇರಿ ತಮ್ಮ ವ್ಯಾಪ್ತಿಯಲ್ಲಿ ಪ್ರತಿ ಮಗುವು ಶಾಲೆಗೆ ದಾಖಲಾಗಿರುವ ಬಗ್ಗೆ ಚರ್ಚಿಸಿ ಖಚಿತಪಡಿಸಿಕೊಳ್ಳುವುದು.
10. ಸಮುದಾಯದ ಸಭೆಗಳನ್ನು ಆಯೋಜಿಸಿ, ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿರುವ ಬಗ್ಗೆ ಹಾಗೂ ದಾಖಲಾದ ಎಲ್ಲಾ ಮಕ್ಕಳಿಗೆ ಪರ್ಯಾಯ ಶೈಕ್ಷಣಿಕ ವ್ಯವಸ್ಥೆಯ ಲಭ್ಯತೆ ಹಾಗೂ ಅನುಷ್ಠಾನದ ಕುರಿತು ಪರಿಶೀಲಿಸುವುದು.
11. ಪ್ರತಿ ವರ್ಷ ಮನೆ–ಮನೆ ಸಮೀಕ್ಷೆಯ ಮೂಲಕ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸುವ ಸಂಬಂಧ ನಿರ್ದಿಷ್ಟವಾದ ಮತ್ತು ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ SATS ನಲ್ಲಿ ಕಾಲಕಾಲಕ್ಕೆ ಇಂದೀಕರಿಸುವುದು.
12. ಕೋವಿಡ್–19ರ ಸಾಂಕ್ರಾಮಿಕ ಪಿಡುಗು ಹಿನ್ನೆಲೆಯಲ್ಲಿ ಶಾಲಾಮಟ್ಟ ಮತ್ತು ವಾರ್ಡ ಮಟ್ಟದಲ್ಲಿ ಸಹಾಯವಾಣಿ/helpdesk ಸ್ಥಾಪಿಸಿ, ಸದರಿ ದೂರವಾಣಿ ಸಂಖ್ಯೆಯನ್ನು ಪೋಷಕರಿಗೆ ನೀಡುವುದು.
13. ಸರ್ಕಾರಿ ಆದೇಶ ಸಂಖ್ಯೆ: ಇಡಿ 38 ಮಾಹಿತಿ 2013, ದಿನಾಂಕ: 15.03.2021ರ ಅಧಿಸೂಚನೆಯಲ್ಲಿ ಹಾಜರಾತಿ ಅಧಿಕಾರಿಗಳ ಜವಾಬ್ದಾರಿಯನ್ನು ತಿಳಿಸಿದ್ದು, ಅದರಂತೆ ಕ್ರಮವಹಿಸುವುದು. ಈ ಸಂಬಂಧ ಶಿಕ್ಷಣ ಸಂಯೋಜಕರು ತಮ್ಮ ವ್ಯಾಪ್ತಿಯ ಸಿ.ಆರ್.ಪಿಗಳ ಸಹಕಾರದೊಂದಿಗೆ ಕಾರ್ಯ ಪ್ರವೃತ್ತರಾಗಿ ತಮ್ಮ ಕರ್ತವ್ಯ ನಿರ್ವಹಿಸುವುದು.
14. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಸ್ಲಮ್ ಹಾಗೂ ದುರ್ಬಲ ಸ್ಥಿತಿಯಲ್ಲಿರುವ ಪ್ರದೇಶಗಳಿಗೆ(Vulnerable) ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರೊಂದಿಗೆ ಭೇಟಿ ನೀಡಿ ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಶಾಲೆಗೆ ಸೇರುವಂತೆ ಮನವೊಲಿಸಿ. ಎನ್‌ಜಿಒಗಳ ಸಹಕಾರದೊಂದಿಗೆ ಸದರಿ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು.
15. ಈಗಾಗಲೇ ವಾರ್ಡ್‌ವಾರು ಇರುವ WER ವಹಿಯಲ್ಲಿ Update ಮಾಡುವುದು.
16. ಮಾಸಿಕ ಸಭೆಗಳಲ್ಲಿ ಶಾಲೆಗೆ ಸೇರಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಮಾಹಿತಿಯನ್ನು ಚರ್ಚಿಸಿ ಉತ್ತಮ ಪಡಿಸಲು, ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳ ಸಹಕಾರ ಪಡೆಯುವುದು.
17. ವಲಸೆ ಮಕ್ಕಳನ್ನು ಗುರುತಿಸಿ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಪೂರಕ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
18. ಸಮೀಕ್ಷೆಯಲ್ಲಿ ಗುರುತಿಸಿರುವ ಮಕ್ಕಳನ್ನು ಪರಿಶೀಲಿಸಿ, ಮುಖ್ಯವಾಹಿನಿಗೆ ತರುವುದು.

ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸ್ಥಳೀಯ ಸರ್ಕಾರಗಳ ಸಹಕಾರದೊಂದಿಗೆ ಶಿಕ್ಷಣ ಇಲಾಖೆಯು ತಿಂಗಳಿಗೊಮ್ಮೆ ಕಡ್ಡಾಯವಾಗಿ SATS ತಂತ್ರಾಂಶದಲ್ಲಿ ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳ ಪ್ರಗತಿ ವಿವರ ಹಾಗೂ ಇತರೆ ಚಟುವಟಿಕೆಗಳನ್ನು ಇಂಧೀಕರಿಸುವುದು. ಈ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ಸಂಯೋಜಕರು ಜವಾಬ್ದಾರಿಯುತವಾಗಿ ಮೇಲ್ವಿಚಾರಣೆ ಮಾಡಲು ಸೂಚಿಸಿದೆ. ಜಿಲ್ಲಾ ಹಂತದಲ್ಲಿ ಉಪ

ನಿರ್ದೇಶಕರು ಆಡಳಿತ ರವರು ಮಾಹಿತಿಯನ್ನು ಪರಿಶೀಲಿಸಿ, ದೃಢೀಕರಣದೊಂದಿಗೆ ಸಮಗ್ರ ಶಿಕ್ಷಣ ಕರ್ನಾಟಕ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಮಾಹಿತಿ ಸಲ್ಲಿಸುವುದು.

(ಎಸ್.ಆರ್.ಉಮಾಶಂಕರ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

(ರಾಕೇಶ್ ಸಿಂಗ್, ಭಾ.ಆ.ಸೇ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

ಇವರಿಗೆ,

1. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ನಿರ್ದೇರ್ಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
4. ರಾಜ್ಯದ ಎಲ್ಲಾ ಜಿಲ್ಲೆಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
5. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಆಯುಕ್ತರು.
6. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ,
7. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರು (ಆಡಳಿತ), ಸಾ.ಶಿ.ಇಲಾಖೆ ಇವರ ಮೂಲಕ.
9. ರಾಜ್ಯದ ಎಲ್ಲಾ ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು.

ಪ್ರತಿ,

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ ಬೆಂಗಳೂರು.
8. ಶಾಖಾ ರಕ್ಷಕಡತ/ಹೆಚ್ಚುವರಿ ಪ್ರತಿ.